CW.10 PW.3

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.793/2018

| | |
|---|---|
| ಸಾಕ್ಷಿದಾರರ ಹೆಸರು | ಗೋಪಾಲ್ ಕೆ ಹೆಚ್ |
| ತಂದೆಯ ಹೆಸರು | ಲೇಟ್ ಕೆ. ಆರ್ ಚಾರಿ |
| ವಯಸ್ಸು | 45 ವರ್ಷ |
| ವೃತ್ತಿ | ಹೆಚ್ ಸಿ 15 ಕನಕಪುರ ಟೌನ್ ಪೋಲೀಸ್ ಠಾಣೆ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 20.12.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ನಾನು ನೋಡಿರುವುದಿಲ್ಲ.

ನಾನು 2016 ರಿಂದ 2021 ರವರೆಗೂ ನಾನು ಮುಖ್ಯ ಪೇದೆಯಾಗಿ ಕನಕಪುರ ಸಂಚಾರಿ ಪೋಲೀಸ್ ಠಾಣೆಯಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 07.02.2018 ರಂದು ಚಾಸಾ-11 ರವರು ನನ್ನನ್ನು ಸದರಿ ಪ್ರಕರಣದಲ್ಲಿ ಮೃತನ ಶವ ಪರೀಕ್ಷೆ ಮಾಡಲು ನನ್ನನ್ನು ಕಳುಹಿಸಿದ್ದರು. ವೀರಭದ್ರೇಗೌಡ ಎಂಬ ವ್ಯಕ್ತಿ ಮೃತ ಹೊಂದಿದ್ದು ಈ ಸಂಬಂಧ ಶವಪರೀಕ್ಷೆ ಮಾಡಲು ಕಳುಹಿಸಿರುತ್ತಾರೆ. ಚಾಸಾ-4 ರಿಂದ 6 ರವರನ್ನು ಪಂಚರನ್ನಾಗಿ ಕರೆಯಿಸಿ ಮಧ್ಯಾಹ್ನ 12 ಗಂಟೆಯಿಂದ 2 ಗಂಟೆಯವರೆಗೂ ಶವತನಿಖಾ ವರದಿಯನ್ನು ತಯಾರು ಮಾಡಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಶವತನಿಖಾ ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು

ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನಂತರ ಕಡತವನ್ನು ಚಾಸಾ-11 ರವರಿಗೆ ಒಪ್ಪಿ ಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನನಗೆ ಮೌಖಿಕವಾಗಿ ಚಾಸಾ-11 ರವರು ಶವತನಿಖೆಗೆ ಕಳುಹಿಸಿರುತ್ತಾರೆ. 12 ಗಂಟೆಗೆ ಆಸ್ಪತ್ರೆಗೆ ಹೋಗಿರುತ್ತೇನೆ. ಪಂಚರಿಗೆ ನೊಟೀಸು ಜಾರಿ ಮಾಡಿ ನಾನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಾನು ಯಾವುದೇ ಶವತನಿಖೆ ಮಾಡದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**